# ಇರುವೆ ಎಲ್ಲೆಲ್ಲೂ ಇರುವೆ

ಇರುವೆ ಇರುವೆ ನಾನಿರುವೆ
ಅಲ್ಲೂ ಇರುವೆ ಇಲ್ಲೂ ಇರುವೆ
ಸಕ್ಕರೆ ಬಳಿ ಅಕ್ಕರೆಯಲಿ ಸುಳಿವೆ
ಸಾಲು ಸಾಲಿನಲಿ ಇರುವೆ

ಕಿರಿಯನಾದರೂ ಹಿರಿ ಸಾಧನೆಗೇರುವೆ
ಗುರಿ ತಲುಪಲು ನಿಲ್ಲದೆ ಮುನ್ನಡೆಯುವೆ
ಆಳಕ್ಕೂ ಇಳಿಯುವೆ ಎತ್ತರಕ್ಕೂ ಏರುವೆ
ನಾನಿರುವೆ ಅರಿವನು ಸಾರುತಲಿರುವೆ

ಕಾಯಕ ತತ್ವವ ಸಾರುತಲಿರುವೆ
ಸಿಹಿ ಇದ್ದಲ್ಲಿ ನಾ ಇದ್ದೇ ಇರುವೆ
ಜೀವನದ ಗುರಿ ಗೆದ್ದೇ ಗೆಲುವೆ
ಶಿಸ್ತು ಶ್ರದ್ಧೆಯಲಿ ಹೆಸರು ಮಾಡಿರುವೆ

ಕಪ್ಪು ಇರುವೆ ಕೆಂಪು ಇರುವೆ
ಆದರೆ ಭಾವದಲಿ ಒಂದಾಗಿರುವೆ
ಬಂಧುರ ಬಾಳಿನಲಿ ಮೊದಲಾಗಿರುವೆ
ಸಿಹಿ ಬದುಕಿನ ಮರ್ಮವ ಸಾರುತಲಿರುವೆ

**-ಶಿ.ಗು. ಕುಸುಗಲ್ಲ, ಬೆಳಗಾವಿ**



# ಯಕ್ಷಸೇನರು ಸತ್ತರಂತೆ

ಒಂದೊಮ್ಮೆ ಒಬ್ಬ ರಾಜನ ಒಡ್ಡೋಲಗ ನಡೆಯುತ್ತಿದ್ದಾಗ ಅವನ ಮಂತ್ರಿ ಗೋಳೋ ಎಂದು ಅಳುತ್ತಾ ಬಂದ. ಅವನ ಅಳುವಿಗೆ ಕಾರಣವೇನೆಂದು ರಾಜ ಪ್ರಶ್ನಿಸಿದ. ಆಗ ಮಂತ್ರಿ ಮಹಾರಾಜರಿಗೆ ಮುಜುರೆ ಸಮರ್ಪಿಸಿ– 'ಮಹಾರಾಜರೇ ಯಕ್ಷಸೇನರು ತೀರಿಕೊಂಡರು' ಎಂದ ಆ ಸುದ್ದಿ ಕೇಳುತ್ತಲೇ ರಾಜ– ಯಕ್ಷಸೇನರು ಸತ್ತರೆಂದು ಹೇಳುತ್ತಾ ಅಳತೊಡಗಿದ. ಯಕ್ಷಸೇನರ ಆತ್ಮಶಾಂತಿಗಾಗಿ 41 ದಿನಗಳ ಶೋಕಾಚರಣೆಯ ಆದೇಶ ನೀಡಿ ಒಡ್ಡೋಲಗಕ್ಕೆ ಮಂಗಲ ಹಾಡಿದ. ಅಲ್ಲಿಂದ ಅಳುತ್ತಲೇ ಅಂತಃಪುರಕ್ಕೆ ಬಂದಾಗ ಅಳುವಿನ ಕಾರಣವೇನೆಂದು ರಾಣಿಯರು ಕೇಳಿದಾಗ ದುಃಖದಲ್ಲಿದ್ದ ರಾಜ ಯಕ್ಷಸೇನರು ಸತ್ತ ಸುದ್ದಿ ಹೇಳುತ್ತಾ ಅಳತೊಡಗಿದ. ಸಂತೋಷದಲ್ಲಿದ್ದ ರಾಣಿವಾಸದವರು ಎದೆ–ಎದೆ ಬಡಿದುಕೊಂಡು 'ಅಯ್ಯೋ ಯಕ್ಷಸೇನರು ಸತ್ತರಲ್ಲಪ್ಪಾ' ಎಂದೆನ್ನುತ್ತಾ ಮತ್ತೆ ಗೋಳೋ ಎಂದು ಅಳುವನ್ನು ಮುಂದುವರಿಸಿದರು.

ಆಗ ಹಿರಿಯ ರಾಣಿಯ ಸೇವಕಿ ಈ ಗೋಳಿನ ಕತೆ ಅರ್ಥವಾಗದೆ ರಾಣಿಯನ್ನು ಏನೆಂದು ಕೇಳಿದಳು. ಆಗ ಆಕೆ ಯಕ್ಷಸೇನರು ತೀರಿಕೊಂಡರಂತೆ ಎಂದೆನ್ನುತ್ತಾ ಮತ್ತೆ ಅಳತೊಡಗಿದಳು. ಆಗ ಆ ಬುದ್ಧಿವಂತ ಸೇವಕಿ 'ಯಕ್ಷಸೇನರು ಮಹಾರಾಜರ ನೆಂಟರೇನು?' ಎಂದು ರಾಣಿಯನ್ನು ಪ್ರಶ್ನಿಸಿದಳು.

ರಾಣಿಗೆ ಯಾರು ಅಂತ ಗೊತ್ತಿಲ್ಲದೆ ರಾಜನ ಹತ್ತಿರ ಹೋಗಿ 'ಯಕ್ಷಸೇನರು ನಮಗೆ ನೆಂಟರೇನು?' ಎಂದು ಕೇಳಿದಳು. ಆದರೆ ಮೂರ್ಖ ರಾಜ ವಿಷಯ ತಿಳಿಯದೆ 41 ದಿನಗಳ ಶೋಕಾಚರಣೆಗೆ ಆಜ್ಞೆ ಮಾಡಿದುದಕ್ಕೆ ಪಶ್ಚಾತ್ತಾಪ ಪಟ್ಟು ಮಂತ್ರಿಯನ್ನು ಕರೆಸಿ ಯಕ್ಷಸೇನರ ಬಗ್ಗೆ ಕೇಳಿದ. ಮಂತ್ರಿಯೂ ಕಕ್ಕಾಬಿಕ್ಕಿಯಾದ. 'ನನಗೆ ಆರಕ್ಷಕ ಪಡೆಯ ಪ್ರಮುಖ ಈ ಸುದ್ದಿ ಕೊಟ್ಟಿದ್ದು ಎಂದಾಗ ನಾನೂ ಅಳಬೇಕಾಯಿತು' ಎಂದ. ತಾನು ಬೇಸ್ತುಬಿದ್ದುದನ್ನು ಮುಚ್ಚಿಟ್ಟು ರಾಜ ಮಂತ್ರಿಗೆ ಯಕ್ಷಸೇನರು ಯಾರೆಂದು ತಿಳಿದು ಬರಲು ಆಜ್ಞೆ ಮಾಡಿದ.

ಮಂತ್ರಿ ಆರಕ್ಷಕನನ್ನು ಕೇಳಿದ. ಆದರೆ ಅವನು 'ಜಮಾದಾರನು ಅಳುತ್ತಾ ಬಂದು ಹೇಳಿದ. ಅದಕ್ಕಾಗಿ ಅತ್ತೆ' ಎಂದುಲಿದ. ಜಮಾದಾರ ತನ್ನ ಹೆಂಡತಿ ಅಳುತ್ತಿದ್ದುದನ್ನು ಕಂಡು ಯಕ್ಷಸೇನರು ಸತ್ತ ವಿಷಯ ತಿಳಿದೆ ಎಂದ. ಆಗ ಜಮಾದಾರನ ಹೆಂಡತಿ 'ನಾನು ಸ್ನಾನಕ್ಕಾಗಿ ಕೆರೆಗೆ ಹೋದಾಗ ಅಲ್ಲಿ ಮಡಿವಾಳ್ತಿ ಎದೆ ಬಡಿದುಕೊಂಡು ಯಕ್ಷಸೇನ ಸತ್ತ ಎಂದು ಗೋಳಿಡುತ್ತಿರುವುದನ್ನು ನೋಡಿ ನಾನೂ ಅತ್ತೆ' ಎಂದಳು.

ಕೊನೆಯಲ್ಲಿ ಎಲ್ಲರೂ ಮಡಿವಾಳ್ತಿ ಮನೆಗೆ ಹೋಗಿ ಯಕ್ಷಸೇನರ ಬಗೆಗೆ ಕೇಳಿದಾಗ 'ಏನು ಮಾಡಲಿ ಸ್ವಾಮಿ, ಅವನನ್ನು ಮಗನಂತೆ ಸಾಕಿದ್ದೆ. ಮುದ್ದಿನಿಂದ ಬೆಳೆಸಿದೆ. ಆದರೆ ನನಗೆ ಯೋಗವಿಲ್ಲ. ಆ ನನ್ನ ಪ್ರೀತಿಯ ಕತ್ತೆ ಯಕ್ಷಸೇನ ಸತ್ತದ್ದಕ್ಕಾಗಿ ಗೋಳೋ ಎಂದು ಅತ್ತೆ' ಎಂದೆನ್ನುತ್ತಾ ಕತ್ತೆಯನ್ನು ನೆನಪಿಸಿಕೊಂಡು ಅಳತೊಡಗಿದಳು. ಬೇಸ್ತುಬಿದ್ದ ಈ ಗಾಂಪರ ಗುಂಪು ರಾಜನಿಗೆ ವಿಷಯ ತಿಳಿಸಿದಾಗ ತನ್ನ ಮೂರ್ಖತನ ಬಯಲಾಗುವುದು ಬೇಡವೆಂದು ರಾಜ ಗಪ್‌ಚಿಪ್ ಆದ.

**-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು**

